


# ಇವಿ ಯಾತ್ರಾ ಆ್ಯಪ್

ಎಲೆಕ್ಟ್ರಿಕ್ ವಾಹನ (ಇವಿ) ಬಳಕೆದಾರರಿಗೆ ನೆರವಾಗಲು ಕೇಂದ್ರ ಸರ್ಕಾರವು ಇವಿ ಯಾತ್ರಾ ಮೊಬೈಲ್ ಆ್ಯಪ್ ಅಭಿವೃದ್ಧಿಪಡಿಸಿದ್ದು, ಈಚೆಗೆ ಅದನ್ನು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಬಳಕೆಗೆ ಮುಕ್ತಗೊಳಿಸಿದ್ದಾರೆ.

**ಶಶಿಕುಮಾರ್ ಸಿ.**




ಎಲೆಕ್ಟ್ರಿಕ್ ವಾಹನಗಳ ಬಳಕೆಯು ಕ್ರಮೇಣ ದೇಶವ್ಯಾಪಿ ಹೆಚ್ಚಾಗುತ್ತಿದ್ದು, ಇವುಗಳ ಬಗ್ಗೆ ಇದ್ದ ಅನುಮಾನಗಳು, ಆತಂಕಗಳು ದಿನೇ ದಿನೇ ಕ್ಷೀಣಿಸುತ್ತಿವೆ. ಎಲೆಕ್ಟ್ರಿಕ್ ವಾಹನ ಖರೀದಿಯತ್ತ ಜನರ ಮನಸ್ಸು ವಾಲುತ್ತಿದೆ.

ಇವಿ ವಾಹನಗಳ ಸಮಸ್ಯೆಗಳೆಂದರೆ, ಒಂದು, ಪೆಟ್ರೋಲ್ ಬಂಕ್‌ಗಳಂತೆ ಎಲ್ಲೆಂದರಲ್ಲಿ ಚಾರ್ಜಿಂಗ್ ಪಾಯಿಂಟ್‌ಗಳು ಇಲ್ಲದಿರುವುದು. ಮತ್ತೊಂದು, ಇರುವ ಕಡಿಮೆ ಸಂಖ್ಯೆಯ ಚಾರ್ಜಿಂಗ್ ಪಾಯಿಂಟ್‌ಗಳು ಎಲ್ಲಿವೆ ಎಂಬುದರ ಮಾಹಿತಿಯು 'ಕೈಬೆರಳ' ತುದಿಗೆ ಲಭ್ಯವಾಗದಿರುವುದು. ಇವಿಗಳ ಬ್ಯಾಟರಿ ಸ್ಫೋಟದಂತಹ ಘಟನೆಗಳ ಬಗ್ಗೆ ಆತಂಕ ಜನರಲ್ಲಿ ನೆಲೆಯೂರಿರುವುದು.

ಇಂಥ ಆತಂಕಗಳನ್ನು ದೂರ ಮಾಡುವ ನಿಟ್ಟಿನಲ್ಲಿ ಹಾಗೂ ಚಾರ್ಜಿಂಗ್ ಪಾಯಿಂಟ್‌ಗಳ ಮಾಹಿತಿಯನ್ನು ಬಳಕೆದಾರರಿಗೆ ಸುಲಭವಾಗಿ ಲಭ್ಯವಾಗುವಂತೆ ಮಾಡಲು ಕೇಂದ್ರ ಸರ್ಕಾರವು ಇವಿ ಯಾತ್ರಾ ಮೊಬೈಲ್ ಆ್ಯಪ್ ಪರಿಚಯಿಸಿದೆ. ಇವಿ ಯಾತ್ರಾ ವೆಬ್ ಪೋರ್ಟಲ್ ಅನ್ನೂ ಲೋಕಾರ್ಪಣೆಗೊಳಿಸಿದೆ.



ರಾಷ್ಟ್ರೀಯ ಶಕ್ತಿ ಸಂವರ್ಧನೆ ದಿನ (ನ್ಯಾಷನಲ್ ಎನರ್ಜಿ ಕನ್ಸರ್ವೇಷನ್ ಡೇ) ಅಂಗವಾಗಿ ಈಚೆಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಆ್ಯಪ್ ಅನ್ನು ಇವಿ ಬಳಕೆದಾರರಿಗೆ ಮುಕ್ತಗೊಳಿಸಿದ್ದಾರೆ. ಇವಿಗಳ ಬಗೆಗಿನ ಸಂಪೂರ್ಣ ಮಾಹಿತಿಯನ್ನು ಈ ಆ್ಯಪ್ ಬಳಕೆದಾರರಿಗೆ ಒದಗಿಸುತ್ತದೆ.

ಡೀಸೆಲ್ ಹಾಗೂ ಪೆಟ್ರೋಲ್ ಆಧಾರಿತ ವಾಹನಗಳ, ಬೈಕ್‌ಗಳ ಜಾಗದಲ್ಲಿ ಇವಿಗಳನ್ನು ತಂದುಕೂರಿಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರವು ಹಲವು ಯೋಜನೆಗಳನ್ನು ಈಗಾಗಲೇ ಜಾರಿಗೆ ತಂದಿದೆ. ಇವಿಗಳ ಖರೀದಿ ವೇಳೆ ವಿಶೇಷ ಸಬ್ಸಿಡಿಯನ್ನೂ ನೀಡುತ್ತಿದೆ. ಭಾರತದ ಇವಿ ಯೋಜನೆಗಳನ್ನು ಹೆಚ್ಚು ಕ್ರಿಯಾಶೀಲವಾಗುವಂತೆ ಮಾಡುವುದು, ದೇಶದಲ್ಲಿ ಇಮೊಬಿಲಿಟಿ ಉತ್ತೇಜಿಸುವುದು ಆ್ಯಪ್ ಹಾಗೂ ವೆಬ್ ಪೋರ್ಟಲ್ ಮುಖ್ಯ ಉದ್ದೇಶ.



ಬ್ಯೂರೊ ಆಫ್ ಎನರ್ಜಿ ಎಫಿಷಿಯೆನ್ಸಿ (ಬಿಇಇ) ನೇತೃತ್ವದಲ್ಲಿ ಅಭಿವೃದ್ಧಿಗೊಂಡ ಈ ಆ್ಯಪ್ ಸದ್ಯ ಗೂಗಲ್ ಆ್ಯಪ್, ಆ್ಯಪಲ್ ಸ್ಟೋರ್‌ನಲ್ಲಿ ಲಭ್ಯವಿದೆ.

## ಆ್ಯಪ್‌ನಲ್ಲಿ ಏನೆಲ್ಲ ಇದೆ?

ಪ್ಲೇಸ್ಟೋರ್ ಅಥವಾ ಆ್ಯಪಲ್ ಸ್ಟೋರ್‌ನಲ್ಲಿ ಆ್ಯಪ್ ಡೌನ್‌ಲೋಡ್ ಮಾಡಿಕೊಂಡು ಇನ್‌ಸ್ಟಾಲ್ ಮಾಡಬೇಕು. ಇವಿ ಬಳಕೆದಾರರು ಅಗತ್ಯ ಮಾಹಿತಿಯನ್ನು ಒದಗಿಸಿ ಆ್ಯಪ್‌ಗೆ ಲಾಗಿನ್ ಆಗಬೇಕು.

ಲಾಗಿನ್ ನಂತರ ಆ್ಯಪ್ ಅನ್ನು ತೆರೆದ ಕೂಡಲೇ ಗೂಗಲ್ ಮ್ಯಾಪ್ ಮಾದರಿಯಲ್ಲಿ ಜಿಪಿಎಸ್ ಮ್ಯಾಪ್ ತೆರೆದುಕೊಳ್ಳುತ್ತದೆ. ಅದರಲ್ಲಿ ನೀವಿರುವ ಸ್ಥಳದ ಸುತ್ತಮುತ್ತ ಎಲ್ಲೆಲ್ಲಿ ಇವಿ ಚಾರ್ಜಿಂಗ್ ಪಾಯಿಂಟ್‌ಗಳಿವೆ ಎನ್ನುವುದರ ಲೊಕೇಷನ್ ಲಭ್ಯವಾಗುತ್ತದೆ. ಹತ್ತಿರದ ಲೊಕೇಷನ್ ಕ್ಲಿಕ್ಕಿಸಿ, ಅಲ್ಲಿಗೆ ಹೋಗಿ ಬ್ಯಾಟರಿ ಚಾರ್ಜ್ ಮಾಡಬಹುದು.

ಆ್ಯಪ್‌ನ ಮೆನು ಬಾರ್‌ನಲ್ಲಿ 'ಮೈ ಬುಕ್ಕಿಂಗ್ಸ್' ಆಯ್ಕೆ ಇದ್ದು, ಅದನ್ನಿನ್ನೂ ಅಪ್‌ಡೇಟ್ ಮಾಡಿಲ್ಲ. ಭವಿಷ್ಯದಲ್ಲಿ ಈ ಆಯ್ಕೆಯಡಿ ಇವಿಗಳ ಚಾರ್ಜಿಂಗ್‌ಗೆ ಬುಕ್ಕಿಂಗ್ ಸೌಲಭ್ಯ ಸಿಗಲಿದೆ. 'ಚಾರ್ಜಿಂಗ್ ಹಿಸ್ಟರಿ' ಆಯ್ಕೆಯಿದ್ದು, ಅದರಲ್ಲಿ ಇವಿಗಳ ಹಿಂದಿನ ಚಾರ್ಜ್ ಬಗ್ಗೆ ಮಾಹಿತಿ ಲಭ್ಯ. 'ರೂಟ್ ಪ್ಲಾನ್' ಆಯ್ಕೆಯಲ್ಲಿ ಜರ್ನಿ ಮ್ಯಾಪ್ ಅನ್ನು ಮಾಡಬಹುದು. ಹಾದಿಯ ಎಲ್ಲೆಲ್ಲಿ ಚಾರ್ಜಿಂಗ್ ಪಾಯಿಂಟ್‌ಗಳಿವೆ ಎನ್ನುವುದನ್ನೂ ತಿಳಿಯಬಹುದು.

'ನ್ಯೂಸ್' ಆಯ್ಕೆಯಿದ್ದು, ರಾಜ್ಯ ಸರ್ಕಾರಗಳು ಹಾಗೂ ಕೇಂದ್ರ ಸರ್ಕಾರ ಇವಿ ಬಗ್ಗೆ ಕೈಗೊಳ್ಳುವ ಯೋಜನೆಗಳು, ಅಪ್‌ಡೇಟ್‌ಗಳ ಬಗ್ಗೆ ಸಮಗ್ರ ಮಾಹಿತಿ ಸಿಗಲಿದೆ. ಇವಿ ಕಮ್ಯುನಿಟಿ ಇದರಿಂದ ಟೈಮ್ ಟು ಟೈಮ್ ಅಪ್‌ಡೇಟ್ಸ್ ಅನ್ನು ಪಡೆಯಬಹುದಾಗಿದೆ. ಜೊತೆಗೆ 'ಮೈ ವೆಹಿಕಲ್' ಆಯ್ಕೆಯಲ್ಲಿ ಬಳಕೆದಾರರು ತಮ್ಮ ಇವಿಗಳ ಬಗ್ಗೆ ಮಾಹಿತಿ ಎಂಟ್ರಿ ಮಾಡಬಹುದು.

ಇವಿ ಚಾರ್ಜಿಂಗ್ ಸ್ಟೇಷನ್‌ನಲ್ಲಿ ಯಾವ ಚಾರ್ಜರ್‌ಗಳನ್ನು ಸ್ಥಾಪಿಸಲಾಗಿದೆ, ಎಷ್ಟು ಚಾರ್ಜಿಂಗ್ ಸ್ಲಾಟ್‌ಗಳು ಲಭ್ಯವಿವೆ, ಎಲೆಕ್ಟ್ರಿಕ್ ವಾಹನವನ್ನು ಚಾರ್ಜ್ ಮಾಡಲು ಎಷ್ಟು ಶುಲ್ಕ ವಿಧಿಸಲಾಗುತ್ತದೆ ಎಂಬಿತ್ಯಾದಿ ಮಾಹಿತಿಯನ್ನು ಆ್ಯಪ್ ಒದಗಿಸಲಿದೆ. ಇದಕ್ಕಾಗಿ ನೋಂದಣಿ ಪ್ರಕ್ರಿಯೆಯಲ್ಲಿ ಭಾಗಿಯಾಗಿ, ರಾಷ್ಟ್ರೀಯ ಆನ್‌ಲೈನ್ ಡೇಟಾಬೇಸ್‌ನಲ್ಲಿ ಬಳಕೆದಾರರು ತಮ್ಮ ವಿವರಗಳನ್ನು ದಾಖಲು ಮಾಡಬೇಕಿದೆ.

ಸದ್ಯ ಇಂಗ್ಲಿಷ್ ಹಾಗೂ ಹಿಂದಿ ಭಾಷೆಯಲ್ಲಿ ಆ್ಯಪ್ ಕಾರ್ಯನಿರ್ವಹಿಸಲಿದೆ. ಭವಿಷ್ಯದಲ್ಲಿ ದೇಶದ ಇತರ ಭಾಷೆಗಳಲ್ಲೂ ಲಭ್ಯವಾಗಲಿದೆ. ಹೆಚ್ಚಿನ ಸಂಖ್ಯೆಯಲ್ಲಿ ಚಾರ್ಜಿಂಗ್ ಕೇಂದ್ರಗಳನ್ನು ಸ್ಥಾಪನೆ ಮಾಡುವುದರ ಜೊತೆಗೆ ಬ್ಯಾಟರಿ ಸೆಲ್‌ಗಳನ್ನು ತಯಾರಿಸಲು ಸರ್ಕಾರ ಮುಂದಾಗಿದೆ. ಇದಕ್ಕಾಗಿ ಪ್ರೊಡಕ್ಷನ್ ಲಿಂಕ್ಡ್ ಇನ್ಸೆಂಟಿವ್ ಯೋಜನೆಯನ್ನು ಪರಿಚಯಿಸಿದ್ದು, ದೇಶದಲ್ಲಿ ಹೆಚ್ಚಿನ ಇವಿ ವಾಹನ ಬಳಕೆಗೆ ಪ್ರೋತ್ಸಾಹಿಸಲು ವಿಶೇಷ ಕೆಲಸಕ್ಕೆ ಮುಂದಾಗಿದೆ.